


### ಶಯನದ ವೈಭವೀಕರಣ!

ಆಧುನಿಕ ಬೆಡ್‌ರೂಂ, ಬಾತ್‌ರೂಂ ಅಲಂಕಾರವನ್ನು ನೇತ್ರಕೆರೆ ಉದಯಶಂಕರ್ ಅವರು ಕಣ್ಣಮುಂದೆ ಕಟ್ಟುವಂತೆ ವೈಭವೀಕರಿಸಿದ್ದಾರೆ. ಒಂದೇ ರೂಮಿನಲ್ಲಿ ವಾಸ ಮಾಡುವವರನ್ನು ಬಿಡಿ, ಸಾಲ-ಸೋಲ ಮಾಡಿ ಚಿಕ್ಕ ಮನೆ ಕಟ್ಟಿಕೊಂಡ ಮಧ್ಯಮ ವರ್ಗದವರಿಗೂ ಇದು ಎಟುಕಲಾರದು. ಕೇವಲ ಅಮೆರಿಕ, ಲಂಡನ್‌ನಂತಹ ಪಾಶ್ಚಿಮಾತ್ಯ ರಾಷ್ಟ್ರಗಳ ವಾಸಿಗಳನ್ನು ಗಮನದಲ್ಲಿಟ್ಟುಕೊಂಡು 'ಶಯನ ಮತ್ತು ಸ್ನಾನ' ಲೇಖನ ಬರೆದಂತಿದೆ.

-ಮೊಳಕಾಲ್ಮೂರು ಸುರೇಶ್, ಬಳ್ಳಾರಿ/ ರಾಜೇಂದ್ರಕುಮಾರ್, ದೊಡ್ಡಬಳ್ಳಾಪುರ/ ಬಿ.ಎಸ್. ರಮೇಶ್, ಬೆಂಗಳೂರು

### ಜತೆಗೊಬ್ಬ ಸಂಗಾತಿಯೂ ಬೇಕು!

'ಮಂಚ, ಹಾಸಿಗೆ ಇದ್ದರೆ ಸಾಕೆ?' (ಎಸ್ಸೆಚ್) ಪ್ರಶ್ನೆ ಸರಿ. ಒಬ್ಬ(ಳು) ಸಂಗಾತಿಯೂ ಬೇಕು! ('ನೀನಿಲ್ಲದೆ ನನ್ನ ಹಾಸಿಗೆ ಸಪ್ಪೆ!' ಎಂಬುದು ಜನಪದ ಗೀತೆಯೊಂದರ ಉಕ್ತಿ.)

- ಸಿಪಿಕೆ, ಮೈಸೂರು

### ಮಾರ್ಮಿಕ ವಿಶ್ಲೇಷಣೆ

ವಿದ್ಯಾರ್ಥಿಗಳು ತಿಳಿಯದಿರುವ, ಆದರೆ ತಿಳಿಯಲೇಬೇಕಾದ ಓದುವ ಕಲೆಯ ಬಗ್ಗೆ ವೈನತೇಯ ಮಾರ್ಮಿಕವಾಗಿ ವಿಶ್ಲೇಷಿಸಿದ್ದಾರೆ.

-ಟಿ.ಎನ್. ಸರಸ್ವತಿ, ತುಮಕೂರು

### ಅಪ್ಪ ಸಮಯೋಚಿತ

ಕೆ.ಎನ್. ಚೈತ್ರಾರ 'ಅಪ್ಪನಿಗೊಂದು ಪತ್ರ' ಸಮಯೋಚಿತವಾಗಿತ್ತು. ಪೋಷಕರಿಗೆ ಹಾಗೂ ಮಕ್ಕಳಿಗೆ ತಿಳಿವಳಿಕೆ ನೀಡುವಂತಿದೆ.

-ಎನ್ ವಸಂತಾ ಆನಂದ್, ಬೆಂಗಳೂರು/ ನಾಗರಾಜ ಬಣಕಾರ್, ಕೊಟ್ಟೂರು

### ಸರಳ, ಆಕರ್ಷಕ ಕಥೆ

ನಾ. ಡಿಸೋಜ ಕಥೆ, 'ಹೊಳೆ ಬಾಗಿಲು' ಸರಳವಾಗಿ ಮೂಡಿಬಂದಿದೆ. ಈ ಕಥೆಯನ್ನು ಓದಿದ ಮೇಲಾದರೂ ಸಾಗರ ಮತ್ತು ತುಮರಿ ಮಧ್ಯೆ ಮುಖ್ಯಮಂತ್ರಿ ಯಡಿಯೂರಪ್ಪನವರು ಸೇತುವೆ ನಿರ್ಮಿಸಿಯಾರೆ?

-ನೆ.ಸು. ಆನಂದ್, ಬೆಂಗಳೂರು/ ಎಂ.ಎಲ್.ಲಕ್ಷ್ಮಣರಾವ್, ದಾವಣಗೆರೆ/ ಕೊಹಿಮ, ಬಸರಕೋಡು/ ಬಿ.ಎಸ್.ಬಿರಾದಾರ, ಆಳಂದ

### ಜಲಚರಗಳ ಸಾವು ಆಘಾತಕಾರಿ

'ತೈಲ ಜೀವಿಗಳು' ಚಿತ್ರ– ಲೇಖನದಲ್ಲಿ ಸುಧಾ ಹೆಗಡೆ ಪ್ರಸ್ತಾಪಿಸಿರುವ ಜಲಚರಗಳ ಸಾವಿನ ಸಂಗತಿ ಓದಿ ಖೇದವಾಯಿತು.

-ಎಚ್. ಆನಂದ್ ಕುಮಾರ್, ಚಿತ್ರದುರ್ಗ

### ಮನ ಕಲಕಿದ ಚಿತ್ರಗಳು

ಬಾಳ ಸಂಜೆಯ ಕ್ಷಣಗಳು ಗುಡಿಹಳ್ಳಿ ನಾಗರಾಜರ ಚಿಕ್ಕ ಬರಹ ಹೃದಯಸ್ಪರ್ಶಿಯಾಗಿತ್ತು. ಬದಲಾಗುತ್ತಿರುವ ಜೀವನಧರ್ಮವನ್ನು ಸಮರ್ಥವಾಗಿ ಕಟ್ಟಿಕೊಟ್ಟಿದ್ದಾರೆ. ಏಕಮುಖವಾಗಬಹುದಾದ ಅಪಾಯ ತಪ್ಪಿಸಿ ಸಮತೋಲನದಿಂದ ವಿಷಯ ನಿರೂಪಿಸಿರುವುದು ಇಷ್ಟವಾಯಿತು. ಕೆ.ವೆಂಕಟೇಶ್ ಅವರ ಚಿತ್ರಗಳು ನೋಡುವ ಕಾವ್ಯಗಳಂತಿವೆ. 'ಎಲ್ಲಾ ಇದ್ದು', 'ಎಲ್ಲರೂ ಇದ್ದು' ನಮ್ಮ ಹಿರಿಯರು 'ಅನಾಥ'ರಾಗುತ್ತಿರುವ ದೃಶ್ಯಗಳು ತೀವ್ರವಾಗಿ ಮನಕಲಕಿದವು.

ಡಾ.ಮೃತ್ಯುಂಜಯ ರುಮಾಲೆ, ಹೊಸಪೇಟೆ/ ಎಸ್.ಲಕ್ಷ್ಮೀನರಸಿಂಹ, ಚಾಮರಾಜನಗರ/ ಜಯಲಕ್ಷ್ಮಿ ಪಾಟೀಲ, ನಾ.ವೆ.ಮುರ್ಕಿ, ಬೆಂಗಳೂರು/ ರಾಜಶೇಖರಗೌಡ, ಕೊಟ್ಟೂರು

### ಮಾನಸಿಕ ಅಸ್ವಸ್ಥ

'ವಿಕಲ ಚೇತನ' ಎಂಬುದಕ್ಕೆ ಕೆ.ವಿ. ಮಂಜುನಾಥ ಮತ್ತು ಡಾ. ಎಚ್. ಚಂದ್ರಶೇಖರ ಅವರು ಚೇತನವನ್ನು ಕಳೆದುಕೊಂಡವನು ಎಂದು ಅರ್ಥೈಸಿದ್ದಾರೆ. ವಾಸ್ತವವಾಗಿ, ಮಾನಸಿಕ ಅಸ್ವಸ್ಥ ಎಂಬುದು ಅದರ ಅರ್ಥ.

-ಸಿ.ಪಿ.ಕೃಷ್ಣಕುಮಾರ್, ಮೈಸೂರು

### 'ಸುಧಾ' ದೆಹಲಿ ಕನ್ನಡಿಗರ ದಾರಿದೀಪ

ಬೆಂಗಳೂರಿನವನಾದ ನಾನು ಕಳೆದ 21 ವರ್ಷಗಳಿಂದ ದೆಹಲಿಯಲ್ಲಿ ವಾಸವಾಗಿದ್ದೇನೆ. ದೆಹಲಿ ಕನ್ನಡ ಶಾಲೆಯಲ್ಲಿ 10ನೇ ತರಗತಿ ಓದುತ್ತಿರುವ ನನ್ನ ಮಗಳಿಗೆ ಬೇಸಿಗೆ ರಜೆಯಲ್ಲಿ 'ಐಪಿಎಲ್ ಕ್ರಿಕೆಟ್ ಕಥೆ ಹಾಗೂ ವ್ಯಥೆ' ಮತ್ತು 'ವಿಜ್ಞಾನದ ಮುನ್ನಡೆ' ಕುರಿತು ಕನ್ನಡದಲ್ಲಿ ಪ್ರಬಂಧಗಳನ್ನು ರಚಿಸಲು ಹೇಳಿದ್ದರು. ಅವಳಿಗೆ ಬೇಗನೆ ಮಾಹಿತಿ ಸಿಗಲಿಲ್ಲ. ನಾನು ಕೂಡ ಸಾಕಷ್ಟು ಪ್ರಯತ್ನಪಟ್ಟೆ. ಬೆಂಗಳೂರಿನಲ್ಲಿರುವ ನನ್ನ ಸ್ನೇಹಿತರನ್ನು ಈ ವಿಷಯದಲ್ಲಿ ನೆರವಾಗುವಂತೆ ಕೋರಿದೆ. ಪ್ರಯೋಜನವಾಗಲಿಲ್ಲ. ಆಗ ನನ್ನ ಪತ್ನಿ ಹಳೆಯ ಸುಧಾ ಸಂಚಿಕೆಗಳಲ್ಲಿ ಈ ಬಗ್ಗೆ ಮಾಹಿತಿ ಇರಬಹುದೆ ಎಂದು ನೋಡತೊಡಗಿದಳು. ಸರಿಯಾದ ಮಾಹಿತಿಯೇ ಸಿಕ್ಕಿತು. ಇತ್ತೀಚಿನ ಸುಧಾ ಸಂಚಿಕೆಗಳಲ್ಲಿ ಓಂಕಾರ ಮೂರ್ತಿ ಐಪಿಎಲ್ ಕುರಿತು ಬರೆದ ಲೇಖನ ಹಾಗೂ ನೇತ್ರಕೆರೆ ಉದಯಶಂಕರ್ ಬರೆದ 'ಭೂಮಿಗೆ ಬಂತು ಬ್ಲೂಮ್ ಬೆಳಕು' ನನ್ನ ಮಗಳಿಗೆ ತುಂಬಾ ನೆರವಾಯಿತು. ಅವುಗಳನ್ನು ಓದಿ ಆಕೆ ಬರೆದ ಪ್ರಬಂಧಗಳಿಗೆ ಭಾರಿ ಮೆಚ್ಚುಗೆಯೇ ವ್ಯಕ್ತವಾಯಿತು. ದೆಹಲಿಯಲ್ಲಿರುವ ನಮಗೆ ಸುಧಾ ಈ ರೀತಿಯಲ್ಲಿ ದಾರಿದೀಪವಾಗಿದೆ.

-ಎಸ್.ಕೆ.ಆನಂದರಾಮ್, ನವದೆಹಲಿ

### ಮುದ್ದಣ್ಣ ಸ್ಮಾರಕ ಕಾವ್ಯ ಪ್ರಶಸ್ತಿ

ಕಾಂತಾವರ ಕನ್ನಡ ಸಂಘವು 2010ನೇ ಸಾಲಿನ ಮುದ್ದಣ್ಣ ಕಾವ್ಯ ಪ್ರಶಸ್ತಿಗಾಗಿ ಮುದ್ರಣಕ್ಕೆ ಸಿದ್ಧವಾಗಿರುವ ಕವನ ಸಂಗ್ರಹಗಳ ಹಸ್ತಪ್ರತಿಗಳನ್ನು ಸ್ವಾಗತಿಸುತ್ತಿದೆ. ಪ್ರಶಸ್ತಿಯು ಹತ್ತು ಸಾವಿರ ರೂ. ನಗದು, ಆಸಕ್ತರು 5ರೂ.ನ ಅಂಚೆ ಚೀಟಿ ಹಚ್ಚಿದ ಸ್ವವಿಳಾಸವಿರುವ ಕವರನ್ನು ಅಧ್ಯಕ್ಷರು, ಕಾಂತಾವರ ಕನ್ನಡ ಸಂಘ, ಅಂಚೆ: ಕಾಂತಾವರ-574129, ಉಡುಪಿ ಜಿಲ್ಲೆ- ಇಲ್ಲಿಗೆ ಕಳುಹಿಸಿ ಸ್ಪರ್ಧೆಯ ವಿವರಗಳನ್ನು ಪಡೆಯಬಹುದು. ವಿವರಗಳನ್ನು ಪಡೆಯುವ ಕೊನೆಯ ದಿನಾಂಕ ಜುಲೈ 15. ಹಸ್ತಪ್ರತಿ ಸ್ವೀಕಾರದ ಕೊನೆಯ ದಿನಾಂಕ: ಆಗಸ್ಟ್ 15. ಹೆಚ್ಚಿನ ಮಾಹಿತಿಗೆ ಸಂಪರ್ಕಿಸಿ: 9900701666.

